ಅ.ದಾ.ನಂ.304/2012
ಪಿ.ಡಬ್ಲೂ:3

**<u>ಸಾಕ್ಷಿಯನ್ನು ಇಂದು ದಿನಾಂಕಃ 07.11.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು</u>**
**<u>ಪಾಟೀ ಸವಾಲುಃ ಶ್ರೀ. ಬಿ ಆರ್ ಎ ., ವಕೀಲರಿಂದ 1 ನೇ ಪ್ರತಿವಾದಿ ಪರವಾಗಿ</u>**

1. ನಾನು 3 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಆಂಗ್ಲ ಭಾಷೆ ಓದಲು ಬರೆಯಲು ಬರುವುದಿಲ್ಲ. ನಾನು ಸಹಿಯನ್ನು ಮಾಡುತ್ತೇನೆ. ನನಗೆ ವಾದಿಯು ಬಿಗರು ಆಗಬೇಕು. ನಮ್ಮ ಮತ್ತು ವಾದಿಯ ಮಧ್ಯ ಹೆಣ್ಣು ಕೊಡುವುದು ಮತ್ತು ತೆಗೆದುಕೊಳ್ಳುವ ರೀತಿಯಲ್ಲಿ ಸಂಬಂಧ ಇರುವುದಿಲ್ಲ ಎಂದರೆ ಸರಿ. ವಾದಿಯು ಈ ದಾವೆಯನ್ನು ಹನುಮೇಶ ಎಂಬುವವರ ಮೇಲೆ ಸಲ್ಲಿಸಿರುತ್ತಾರೆ. ವಾದಿಯು ಹನುಮೇಶ ಎಂಬುವನನ್ನು ಹೊರತು ಪಡಿಸಿ ಬೇರೆ ಯಾರ ಮೇಲೆ ದಾವೆ ಸಲ್ಲಿಸಿರುತ್ತಾನೆ ಎಂಬುದು ನನಗೆ ಗೊತ್ತಿಲ್ಲ. ನಾನು ವಾದ ಪತ್ರವನ್ನು ಓದಿರುವುದಿಲ್ಲ.

2. ವಾದಿ ಮತ್ತು 1 ನೇ ಪ್ರತಿವಾದಿಯ ಮಧ್ಯ ಯಾವ ವ್ಯವಹಾರ ಆಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ವಾದಿ ಮತ್ತು 1 ನೇ ಪ್ರತಿವಾದಿಯ ಮಧ್ಯ ಆದ ವ್ಯವಹಾರದ ಕುರಿತು ದಾಖಲಾತಿಗಳನ್ನು ಸಹ ನಾನು ನೋಡಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ವಾದಿ ಮತ್ತು 1 ನೇ ಪ್ರತಿವಾದಿ ಮಧ್ಯ ಆದ ವ್ಯವಹಾರದ ದಾಖಲಾತಿಗಳನ್ನು ನಾನು ನೋಡಿರುತ್ತೇನೆ ಎಂದು ಬರೆಸಿರುವುದಿಲ್ಲ. ಅಬಕಾರಿ ಕಛೇರಿಗೆ ಯಾರು ಯಾರು ಅರ್ಜಿಗಳನ್ನು ಕೊಟ್ಟಿರುತ್ತಾರೆ, ಯಾವ ದಿನಾಂಕದಂದು ಕೊಟ್ಟಿರುತ್ತಾರೆ ಮತ್ತು ಯಾವ ದಿನಾಂಕದಂದು ಲೈಸೆನ್ಸ್ ನ್ನು ಯಾರು ಪಡೆದಿರುತ್ತಾರೆ ಎಂಬುದರ ಕುರಿತು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

3. 1ನೇ ಪ್ರತಿವಾದಿಯ ಹೆಸರಿನಲ್ಲಿರುವ ಲೈಸೆನ್ಸ ನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು 1ನೇ ಪ್ರತಿವಾದಿಯ ಹೆಸರಿನಲ್ಲಿ ಬಾರ್ ಲೈಸೇನ್ಸ 1986 ರಲ್ಲಿ ಇತ್ತು ಎಂದು ಹೇಳುತ್ತಾರೆ. ನನ್ನದು ತೆಲಗಿ ಗ್ರಾಮ ಇರುವುದಿಲ್ಲ ಎಂದರೆ ಸರಿ. ನಾನು ಮೂಲತಃ ಯಾದಗಿರಿ ಜಿಲ್ಲೆಯ ಹುಣಸಗಿ ತಾಲೂಕಿನ ಕೊಡೆಕಲ್ ಗ್ರಾಮದಲ್ಲಿ ಇರುತ್ತೇನೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡಾ ವಾದಿಯ ಮಾತನ್ನುಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ರಿಂದ 5ನೇ ಪ್ರತಿವಾದಿಗಳ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರು 1ನೇ ಪ್ರತಿವಾದಿ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.**

**ಮರುವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**